**5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ (ಪೀಠಾಸೀನ, ಸಾಗರ)**
**ಎಸ್.ಸಿ. ಸಂಃ 10038/2021**

ಪಿಡಬ್ಲೂ-15

ಸಿಡಬ್ಲೂ- 18

| | |
|---|---|
| ಸಾಕ್ಷಿ ಹೆಸರು | - ಪ್ರಶಾಂತ್ ಕುಮಾರ್ ಟಿ ಬಿ |
| ತಂದೆ ಹೆಸರು | - ಬಂಗಾರಪ್ಪ |
| ವಯಸ್ಸು | - 36 ವರ್ಷ |
| ಉದ್ಯೋಗ | - ಪಿ ಎಸ್ ಐ , ಶಿರಾಳಕೊಪ್ಪ ಪೋಲೀಸಿ ಠಾಣೆ |
| ವಾಸಃ | - ಶಿರಾಳಕೊಪ್ಪ |

**ಪ್ರಮಾಣ ವಚನ ಭೋದಿಸಿದ ದಿನಾಂಕಃ 29-10-2025.**

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರವರಿಂದಃ**

ದಿನಾಂಕಃ 02-03-2020 ರಿಂದ 16-11-2021 ರ ವರೆಗೆ ಸೊರಬ ಪೋಲೀಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ಮಾಡಿರುತ್ತೇನೆ.

ದಿನಾಂಕಃ 04-04-2020 ರಂದು ಚಾಸಾ17 ರವರಿಂದ ಪ್ರಕರಣದ ಕಡತವನ್ನು ಪಡೆದುಕೊಂಡು, ಕಡತವನ್ನು ಪರಿಶೀಲಿಸಿ ತನಿಖೆಯನ್ನು ಮುಂದುವರೆಸಿರುತ್ತೇನೆ. ದಿನಾಂಕಃ 04-04-2020 ರಂದು ಚಾಸಾ1 ರವರ ಮುಂದುವರೆದ ಹೇಳಿಕೆಯನ್ನು

ಪಡೆದುಕೊಂಡಿರುತ್ತೇನೆ. ಅದೇ ದಿವಸ ಚಾಸಾ6 ರಿಂದ ಚಾಸಾ10 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 20–08–2020 ರಂದು ಚಾಸಾ14 ರವರು ಚಾಸಾ2 ರವರಿಗೆ ಚಿಕಿತ್ಸೆ ನೀಡಿದ ಬಗ್ಗೆ ಮತ್ತು ಚಾಸಾ2 ರವರ ಪ್ರಸ್ತುತ ಸ್ಥಿತಿಯ ಬಗ್ಗೆ ನೀಡಿದ ಅಭಿಪ್ರಾಯ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಅಭಿಪ್ರಾಯ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ11 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸ್ವೀಕೃತ ಸಹಿಯನ್ನು ನಿಪಿ11(ಬಿ) ಎಂದು ಗುರುತಿಸಲಾಯಿತು.

ನಾನು ಚಾಸಾ 12 ಡಾಃ ಸತೀಶ ರವರಿಂದ ಕಲ್ಲು ಮತ್ತು ಮರದ ರಿಪೀಸ್ ನಿಂದ ಹೊಡೆದರೆ ಗಾಯದ ಪ್ರಮಾಣಪತ್ರದಲ್ಲಿ ಹೇಳಿರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ನೀಡಿದ ಅಭಿಪ್ರಾಯ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ಅಭಿಪ್ರಾಯ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ13 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ13(ಬಿ) ಎಂದು ಗುರುತಿಸಲಾಯಿತು.

ನಂತರ ತನಿಖೆ ಪೂರ್ಣಗೊಂಡಿದ್ದರಿಂದ ದಿನಾಂಕಃ 03–10–2020 ರಂದು ಮಾನ್ಯ ನ್ಯಾಯಾಲಯದ ಮುಂದೆ ಆರೋಪಿತರ ವಿರುದ್ಧ ದೋಷಾರೋಪಣಾ ವರದಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಟಿ ಬಿ ಎಂ ವಕೀಲರಿಂದಃ</u>**

ನಾನು ದೋಷಾರೋಪಣಾ ವರದಿಯನ್ನು ಸಲ್ಲಿಸುವ ಮೊದಲು ಹಿಂದಿನ ತನಿಖಾಧಿಕಾರಿಗಳು ತನಿಖೆಯನ್ನು ಸರಿಯಾದ ರೀತಿಯಲ್ಲಿ ಮಾಡಿದ್ದಾರೋ ಇಲ್ಲವೋ ಎಂದು ಪರಿಶೀಲನೆ ಮಾಡಿರುತ್ತೀರಾ ಎಂದರೆ ಸಾಕ್ಷಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ದೋಷಾರೋಪಣಾ ವರದಿಯ ಪ್ರಕಾರ ಗಲಾಟೆ ಆಗುವುದಕ್ಕೆ ಕಾರಣ ಏನು ಎಂದರೆ ಸಾಕ್ಷಿ ಚಾಸಾ1 ಮತ್ತು 2 ರವರ ಮನೆಯ ಹಿತ್ತಲಿನ ತೋಟಕ್ಕೆ 1 ನೇ ಆರೋಪಿ ಮತ್ತು ಅವರ ಮನೆಯ ಕಡೆಯವರು ಬೆಂಕಿ ಹಾಕಿ ತೋಟವನ್ನು ಹಾಳು ಮಾಡಿದ್ದ ಬಗ್ಗೆ ವಿಚಾರ ಮಾಡಲು 1 ನೇ ಆರೋಪಿಯ ಮನೆಯ ಹತ್ತಿರ ಹೋಗುತ್ತಿರುವಾಗ ಈ ಪ್ರಕರಣದಗಲಾಟೆ ನಡೆದಿರುತ್ತದೆ. ಚಾಸಾ1 ರವರ ತೋಟಕ್ಕೆ ಬೆಂಕಿ ಹಾಕಿದ್ದರೋ ಇಲ್ಲವೋ ಎಂದು, ಚಾಸಾ1 ರವರಿಗೆ ನಷ್ಟ ಆಗಿತ್ತೋ ಎಂದು ತಿಳಿದುಕೊಳ್ಳಲು ನಾನು ಮತ್ತು ನನ್ನ ಹಿಂದಿನ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿ.

ಚಾಸಾ1 ರವರ ಮನೆಯ ಹಿತ್ತಲು ಮತ್ತು 1ನೇ ಆರೋಪಿಯ ಮನೆಯ ಹಿತ್ತಲು ಹೊಂದಿಕೊಂಡಿರುತ್ತದೆ, ಮಧ್ಯ ಬೇಲಿ ಇರುತ್ತದೆ ಎಂದರೆ ಸರಿ. ಚಾಸಾ1 ರವರು ನೀಡಿದ ದೂರನ್ನು ನಾನು ನೋಡಿರುವುದಿಲ್ಲ. ಈಗ ತೋರಿಸಿದ ನಿಡಿ1 ಮತ್ತು ನಿಡಿ2 ರ ಪ್ರಕಾರ ಘಟನೆ ನಡೆಯಿತು ಎಂದು ಹೇಳಲಾದ ದಿವಸ 1ನೇ ಆರೋಪಿಗೆ ಚಾಸಾ1 ಮತ್ತು 2ರವರು ಹಲ್ಲೆ ಮಾಡಿ ಪೆಟ್ಟಾದಾಗ ಸೊರಬ ಮತ್ತು ಸಾಗರ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನನ್ನ ಹಿಂದಿನ ಅಧಿಕಾರಿ ಚಾಸಾ1 ರವರ ತೋಟಕ್ಕೆ ಹೋಗಿ ಪರಿಶೀಲನೆ ಮಾಡಿದರೆ ಚಾಸಾ1 ರವರು 1ನೇ ಆರೋಪಿಯ ತೋಟವನ್ನು ಜೆ ಸಿ ಬಿ ಯಿಂದ ಹಾಳು ಮಾಡಿರುವುದು ಗೊತ್ತಾಗುತ್ತದೆ ಎಂದು ಅವರು ಚಾಸಾ1 ರವರ ತೋಟಕ್ಕೆ ಹೋಗಿ ಸ್ಥಳ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಚಾಸಾ1 ರವರ ಮುಂದುವರೆದ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ ಹಾಗೂ ಅದೇ ರೀತಿ ಚಾಸಾ6 ರಿಂದ 10 ರವರ ಹೇಳಿಕೆಗಳನ್ನು ಸಹ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರ ತಲೆಗೆ ಅವರದ್ದೆ ಜೆ ಸಿ ಬಿ ಯ ಬಕೇಟ್ ಹೊಡೆದು ಗಾಯ ಆಗಿರುತ್ತದೆ, ನಾನು ಆ ಬಗ್ಗೆ ತನಿಖೆ ಮಾಡಿರುವುದಿಲ್ಲ

ಎಂದರೆ ಸರಿಯಲ್ಲ . 1 ನೇ ಆರೋಪಿಗೆ ಆದ ಗಾಯಗಳ ಬಗ್ಗೆ ಮತ್ತು ಚಾಸಾ1 ರವರು ಜೆ ಸಿ ಬಿ ಯಿಂದ 1 ನೇ ಆರೋಪಿಯ ತೋಟವನ್ನು ಹಾಳು ಮಾಡಿದ್ದ ಬಗ್ಗೆ ನಾನು ತನಿಖೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ1 ರವರ ಮನೆಯ ಹಿತ್ತಲು ಮತ್ತು 1 ನೇ ಆರೋಪಿಯ ಮನೆಯ ಹಿತ್ತಲು ಅಕ್ಕ-ಪಕ್ಕ ಇರುತ್ತದೆ ಎಂದರೆ ಸರಿ. ಚಾಸಾ1 ರವರ ಮನೆಯ ಹಿತ್ತಲಿನಿಂದ 1 ನೇ ಆರೋಪಿಯ ಮನೆಯ ಹಿತ್ತಲಿಗೆ 15 ಅಡಿ ಅಂತರ ಇರುತ್ತದೆ ಎಂದರೆ ಸರಿ. 1 ನೇ ಆರೋಪಿಯ ಮನೆಯ ಹಿತ್ತಲಿಗೆ ಹೋಗಲು ರಸ್ತೆ ಬಳಸುವ ಅವಶ್ಯಕತೆ ಇರುವುದಿಲ್ಲ, ರಸ್ತೆಯ ಮುಖಾಂತರ ಹೋದರೆ ಎರಡುವರೆ ಕಿ ಮೀ ಆಗುತ್ತದೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಸರಿಯಾದ ರೀತಿಯಲ್ಲಿ ತನಿಖೆ ಮಾಡಿದ್ದರೆ ಚಾಸಾ1 ಮತ್ತು ಚಾಸಾ2 ರವರ ಮೇಲೆ ಪ್ರಕರಣ ದಾಖಲು ಮಾಡಬೇಕಾಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).